**:: COMPROMISE DECREE ::**

**IN THE COURT OF THE SENIOR CIVIL JUDGE AND J.M.F.C. H.D.KOTE**

**O.S. NO: 238/2025**

ವಾದಿ : ಶ್ರೀಮತಿ ಉಮಾಮಹೇಶ್ವರಿ
ಕೋಂ ಲೇಟ್ ಎಂ.ಎಸ್. ಸಿದ್ದೇಗೌಡ
ವಯಸ್ಸು ಸುಮಾರು 54 ವರ್ಷ,
ಚಾಮನಹಳ್ಳಿಹುಂಡಿ ಗ್ರಾಮ.
ಹಂಪಾಪುರ ಹೋಬಳಿ,
ಹೆಚ್.ಡಿ. ಕೋಟೆ, ತಾಲ್ಲೂಕು,
ಮೈಸೂರು ಜಿಲ್ಲೆ.

ಹಾಲಿ ವಾಸ:

ಶ್ರೀಮತಿ ಉಮಾಮಹೇಶ್ವರಿ
ಕೋಂ ಲೇಟ್ ಎಂ.ಎಸ್. ಸಿದ್ದೇಗೌಡ
ವಯಸ್ಸು ಸುಮಾರು 54 ವರ್ಷ,
#21, 2 ನೇ ಕ್ರಾಸ್, ಏ ಬ್ಲಾಕ್,
ಮೈಸೂರು ಸಿಟಿ.

**( Sri. B.S.T.P., Advocate for Plaintiff.)**

ವಿರುದ್ಧ

ಪ್ರತಿವಾದಿಗಳು :1. ಶ್ರೀಮತಿ ಗೌರಮ್ಮ
ಕೋಂ ಲೇಟ್ ಈರಪ್ಪ,
ವಯಸ್ಸು ಸುಮಾರು 70 ವರ್ಷ,

2. ಶ್ರೀ ರೇವಣ್ಣ ಬಿನ್ ಈರಪ್ಪ
ವಯಸ್ಸು ಸುಮಾರು 55 ವರ್ಷ.

3. ಶ್ರೀಮತಿ ಶಿವಮ್ಮ ಕೋಂ ಬಿ. ಇ. ರೇವಣ್ಣ
ವಯಸ್ಸು ಸುಮಾರು 26 ವರ್ಷ,

4. ಶ್ರೀ ಆರ್. ಚೇತನ್ ಕುಮಾರ್
ಬಿನ್ ಬಿ. ಇ. ರೇವಣ್ಣ
ವಯಸ್ಸು ಸುಮಾರು 35 ವರ್ಷ,

5. ಕು| ಸಿ. ಆರ್. 'ಚೈತ್ರ ಬಿನ್ ಬಿ. ಇ. ರೇವಣ್ಣ
ವಯಸ್ಸು ಸುಮಾರು 42 ವರ್ಷ,

1 ರಿಂದ 5 ನೇ ಪ್ರತಿವಾದಿಗಳ
ವಿಳಾಸ ಚಾಮನಳ್ಳಿಹುಂಡಿ ಗ್ರಾಮ,
ಹಂಪಾಪುರ ಹೋಬಳಿ, ಹೆಚ್. ಡಿ. ಕೋಟೆ
ತಾಲ್ಲೂಕು, ಮೈಸೂರು ಜಿಲ್ಲೆ.

**( Sri. C.S.P., Advocate for Defendant No. 1 to 5.)**

**SUIT FILED ON:02.12.2025**

**Suit claim:** The plaintiff most humbly prays that this honorable court be pleased-

1.To pass a judgment and decree for specific performance of contract and direct the defendants to execute the regular sale deed and to hand over the suit schedule property,

2.If the defendants fails to execute regular sale deed, this honorable court may kindly be appointed court commissioner for executing sale deed,

3.And defendants re pay the advance amount of rs. 12,00,000/- (twelve lakhs only) at the rate of 18 percent

dated- 19.08.2023 to the execute the sale deed, and grant such other reliefs as the honorable court deems fit to grant under the circumstances of the case, in the interest of justice and equity.

The suit was taken on the 09th day of **April**, 2026 for final disposal before **Sri. Mahesh B.T., B.com., L.L.M, Senior Civil Judge & J.M.F.C, H.D.Kote**, in the presence of **Sri B.S.T.P., advocate for the plaintiff** and **Sri C.S.P., advocate for the defendant No. 1 to 5.** The following order was passed.

The case is called out. Parties and their respective counsels are present and have settled the matter amicably and filed a compromise petition U/O 23 Rule 3 of CPC and its contents are read over and explained to the parties in the language known to them and have agreed and accepted the terms and conditions of the compromise petition which seems to be lawful and voluntarily one. Therefore, the compromise petition is accepted and the suit is decreed in terms of compromise petition.

ದಿವಾನಿ ಪಕ್ರಿಯಾ ಸಂಹಿತೆ ಆದೇಶ **23** ನಿಯಮ **3** ರ ರೀತ್ಯಾ ಸಲ್ಲಿಸಲಾದ ಅರ್ಜಿ.

ವಾದಿ ಮತ್ತು ಪ್ರತಿವಾದಿಗಳು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

ವಾದಿಯು ಪ್ರತಿವಾದಿಗಳ ವಿರುದ್ಧ ನಿರ್ದಿಷ್ಟ ಕರಾರು ಅನುಷ್ಠಾನ ಕಾಯ್ದೆ ಅಡಿಯಲ್ಲಿ Suit for Specific Performance of Contract.ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ದಾವಾ ಸಲ್ಲಿಸಿದ ನಂತರ ಪ್ರತಿವಾದಿಗಳಿಗೆ ಸಮನ್ಸ್ ಜಾರಿಯಾಗಿ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಘನ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ.

ಪ್ರತಿವಾದಿಗಳು ದಾವಾ ಷೆಡ್ಯೂಲ್ ಆಸ್ತಿಯ ಮಾಲೀಕರು ಹಾಗೂ ಸ್ವಾಧೀನಾನುಭವಹೊಂದಿ ಅವರ ಸಂಪೂರ್ಣ ಮಾಲೀಕತ್ವ ಹಾಗೂ ಹಕ್ಕು ಬಾದ್ಯತೆಗೆ ಸೇರಿದ ಸ್ವಯಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ವಾದಿಗೆ ಮಾರಾಟಮಾಡಲು ನೊಂದಾಯಿತ ಕ್ರಯದ ಕರಾರುಪತ್ರದ ಮೂಲಕ ನೊಂದಣಿ ಮಾಡಿಕೊಟ್ಟಿರುತ್ತಾರೆ. ಈ ದಿನ ವಾದಿ ಮತ್ತು ಪ್ರತಿವಾದಿಗಳು ತಮ್ಮ ಹಿತೈಶಿಗಳ ಹಿತವಚನದಿಂದ ದಾವೆಯನ್ನು ನ್ಯಾಯಾಲಯದ ಮುಂದೆ ಸ್ವತ್ತನ್ನು ಪ್ರತಿವಾದಿಗಳು ಒಟ್ಟು ರೂ.15,00,000/-(ಹದಿನೈದು ಲಕ್ಷ ರೂಪಾಯಿ)ಗಳಿಗೆ ಕ್ರಯಕ್ಕೆ ಕೊಡಲು ಒಪ್ಪಿ ಕ್ರಯದ ಮೊಬಲಗಿನ ಪೈಕಿ ರೂ.12,00,000/-(ಹನ್ನೆರಡು ಲಕ್ಷ ರೂಪಾಯಿ)ಗಳನ್ನು ಪಡೆದುಕೊಂಡು ರಾಜಿ ಮಾಡಿಕೊಳ್ಳಲು ಒಪ್ಪಿರುತ್ತಾರೆ. ದಾವಾ ಹೆಚ್.ಡಿ.ಕೋಟೆ ಉಪನೊಂದಣಾಧಿಕಾರಿಗಳ ಕಛೇರಿಯ 1 ನೇ ಪುಸ್ತಕದ ದಸ್ತವೇಜು ನಂಬರ್ ಹೆಚ್ ಡಿ ಕೆ -1-02617-2023-24 ಆಗಿ ದಿನಾಂಕ:19-08-2023 ರಂದು ರೂ.12,00,000/-ಗಳನ್ನು ಈಗಾಗಲೇ ಪಡೆದುಕೊಂಡು ಕ್ರಯದ ಒಪ್ಪಂದದ ಕರಾರುಪತ್ರವನ್ನು ನೊಂದಣಿ ಮಾಡಿಕೊಟ್ಟಿರುತ್ತಾರೆ. ಪ್ರಸ್ತುತ ಮೇಲ್ಕಂಡ ವಾದಿ ಮತ್ತು ಪ್ರತಿವಾದಿಗಳು ರಾಜಿಮಾಡಿಕೊಳ್ಳಲು ಒಪ್ಪಿಕೊಂಡಿದ್ದು, ಈ ಮೇಲ್ಕಂಡ ರಾಜಿ ಅರ್ಜಿಯಂತೆ ಪ್ರತಿವಾದಿಗಳು ವಾದಿಗೆ ರೂ.11,00,000/- ಗಳನ್ನು ಈ ದಿನದಿಂದ 6 ತಿಂಗಳ ವಾಯಿದೆ ಒಳಗಾಗಿ ಪಾವತಿ ಮಾಡಲು ಒಪ್ಪಿಕೊಂಡಿರುತ್ತಾರೆ. ಒಂದು ವೇಳೆ ಸದರಿ ವಾಯಿದೆ ಒಳಗಾಗಿ ಪ್ರತಿವಾದಿಗಳು ವಾದಿಗೆ ಹಣವನ್ನು ಪಾವತಿಮಾಡದೇ ಇದ್ದ ಪಕ್ಷದಲ್ಲಿ ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ವಾದಿಗೆ ಸಂಬಂಧಪಟ್ಟ ನೊಂದಣಾಧಿಕಾರಿಗಳ ಕಛೇರಿಯಲ್ಲಿ ವಾದಿಯ ಹೆಸರಿಗೆ ಕ್ರಯಪತ್ರ ನೊಂದಣಿ ಮಾಡಿಕೊಡಲು ಒಪ್ಪಿಕೊಂಡಿರುತ್ತಾರೆ.

ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಪೂರ್ತಾ ನ್ಯಾಯಾಲಯದ ಶುಲ್ಕವನ್ನು ವಾದಿಗೆ ಹಿಂದಿರುಗಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ಜಂಟಿ ರಾಜಿ ಅರ್ಜಿಯನ್ನು ಪುರಸ್ಕರಿಸಿ ರಾಜಿ ಅರ್ಜಿಯಂತೆ ಡಿಕ್ರಿ ಮಾಡಬೇಕೆಂದು ನ್ಯಾಯಾ ಮತ್ತು ಸಮಾನತೆ ದೃಷ್ಟಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

ಈ ಮೇಲೆ ಹೇಳಿರುವ ಎಲ್ಲಾ ಅಂಶಗಳನ್ನು ವಾದಿ ಮತ್ತು ಪ್ರತಿವಾದಿಗಳು ಆತ್ಮ ಸಂತೋಷದಿಂದ ಮತ್ತು ಖುದ್ದು ರಾಜಿಯಿಂದ ಒಪ್ಪಿ ಈ ರಾಜಿ ಒಪ್ಪಂದಕ್ಕೆ ಈ ದಿನ ಸಹಿ ಮಾಡಿರುತ್ತಾರೆ.

And it is further ordered that, the compromise petition filed by the parties is part and parcel of the compromise decree.

And it is further ordered that, office to return the Court Fee as per relevant provision of KCF and SV Act and also to return the original documents in favor of the plaintiff with proper identification.

Given under my hand and seal of this Court on the 09th day of April, 2026.

SENIOR CIVIL JUDGE & JMFC
H.D.KOTE.

## <u>MEMORANDUM OF COST INCURRED IN THE SUIT</u>

| | **Plaintiff/s** | **Defendant/s** |
|---|---|---|
| 1. Court fee on Plaint | 87125-00 | -- |
| 2. Service of Process | 24-00 | -- |
| 3. Advocate fee | -- | -- |
| **TOTAL** | **87149-00** | **--** |

SENIOR CIVIL JUDGE & JMFC
H.D.KOTE.

<u>ಷೆಡ್ಯೂಲ್ ಸ್ವತ್ತು</u>

ಮೈಸೂರು ಜಿಲ್ಲೆ, ಹೆಚ್. ಡಿ. ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಮಾದಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.72/1 ರ 0.20.00.00 ವುಳ್ಳ ಇಪ್ಪತ್ತು ಗುಂಟೆ ಖುಷಿ ಜಮೀನಿಗೆ ಚಕ್ಕುಬಂಧಿ:-

ಪೂರ್ವಕ್ಕೆ : ನಾಗರತ್ನಮ್ಮರವರ ಜಮೀನು.
ಪಶ್ಚಿಮಕ್ಕೆ : ಚಾನೆಲ್
ಉತ್ತರಕ್ಕೆ : ಚಾನೆಲ್
ದಕ್ಷಿಣಕ್ಕೆ : ಸೋಮಪ್ಪರವರ ಜಮೀನು

SENIOR CIVIL JUDGE & JMFC
H.D.KOTE.